

ಗುಂಡನ ಪತ್ನಿ ಅಂಬ್ಯುಲೆನ್ಸ್‌ಗೆ ಫೋನಾಯಿಸಿದಳು.

ಆಪರೇಟರ್: ಏನು ಸಮಸ್ಯೆ?

ಗುಂಡನ ಪತ್ನಿ: ನನ್ನ ಕಾಲ್ಬೆರಳು ಕಾಫಿ ಟೇಬಲ್‌ಗೆ ಎಡವಿದೆ.

ಆಪರೇಟರ್ (ನಗುತ್ತಾ): ಅದಕ್ಕೆ ನೀವು ಅಂಬ್ಯುಲೆನ್ಸ್ ಕರೆಸುತ್ತಿರುವಿರಾ?

ಗುಂಡನ ಪತ್ನಿ: ಇಲ್ಲ, ಅಂಬ್ಯುಲೆನ್ಸ್ ನನ್ನ ಪತಿಗೆ.. ಅವರು ಆಗ ನಗಬಾರದಿತ್ತಲ್ವಾ..?

★★★

**ಪರಿಹಾರ**

ಹೆಂಡತಿಯ ಕೆನ್ನೆಗೆ ಹೊಡೆದ ತಪ್ಪಿಗಾಗಿ ನ್ಯಾಯಾಧೀಶರು ಗುಂಡನಿಗೆ 1000 ರೂಪಾಯಿ ದಂಡ ವಿಧಿಸಿದರು.

ಆಗ ಗುಂಡ ನ್ಯಾಯಾಧೀಶರಲ್ಲಿ ಕೇಳಿದ 'ನಾನವಳ ಇನ್ನೊಂದು ಕೆನ್ನೆಗೆ ಬಾರಿಸಲೆ?'

ನ್ಯಾಯಾಧೀಶರು ಸಿಟ್ಟಿನಿಂದ 'ಯಾಕೆ?' ಎಂದು ಗದರಿಸಿದರು.

ಗುಂಡ: ಚಿಲ್ಲರೆಯಿಲ್ಲ, ನನ್ನ ಬಳಿ 2000 ರೂಪಾಯಿಯ ನೋಟ್ ಇದೆ.

★★★

**ಪರಿಹಾರ**

ಭಿಕ್ಷುಕ (ಮಂದಿರದ ಹೊರಗೆ): ದೇವರ ಹೆಸರಲ್ಲಿ ಏನಾದರೂ ಕೊಡಿ ಸ್ವಾಮಿ, ನಾಲ್ಕು ದಿನದಿಂದ ಏನೂ ತಿಂದಿಲ್ಲ.

ಗುಂಡ: ಎರಡು ಸಾವಿರ ರೂಪಾಯಿಯ ಚಿಲ್ಲರೆ ಇದೆಯಾ?

ಭಿಕ್ಷುಕ: ಇದೆ ಸ್ವಾಮಿ

ಗುಂಡ: ಸರಿ ಹಾಗಾದರೆ, ಮೊದಲು ಅದರಿಂದ ಏನಾದರೂ ಖರೀದಿಸಿ ತಿನ್ನು!

★★★

ವೃದ್ಧ (ಡಾಕ್ಟರ್ ಬಳಿ): ನನ್ನಲ್ಲಿ ಹಣವಿಲ್ಲ. ದಯವಿಟ್ಟು ನನಗೆ ಚಿಕಿತ್ಸೆ ನೀಡಿ. ನಿಮಗೆ ಅವಶ್ಯಕತೆ ಬಿದ್ದಾಗ ನಿಮ್ಮ ಕೆಲಸವನ್ನು ನಾನೂ ಉಚಿತವಾಗಿ ಮಾಡಿ ಕೊಡುತ್ತೇನೆ.

ಡಾಕ್ಟರ್ ಅವನಿಗೆ ಉಚಿತ ಚಿಕಿತ್ಸೆ ನೀಡಿದರು. ಬಳಿಕ ವಿಚಾರಿಸಿದರು, 'ನೀವೇನು ಕೆಲಸ ಮಾಡುತ್ತಿರುವಿರಿ ಸ್ವಾಮಿ?'

ವೃದ್ಧ: ಶವ ಸಂಸ್ಕಾರ ಮಾಡುತ್ತೇನೆ ಡಾಕ್ಟ್ರೇ..!

★★★

**ಆಜ್ಞಾಪಾಲನೆ**

ನ್ಯಾಯಾಧೀಶರು: ನೀನು ಪೊಲೀಸ್ ಅಧಿಕಾರಿಯ ಜೇಬಿನೊಳಗೆ ಉರಿಯುತ್ತಿದ್ದ ಬೆಂಕಿ ಕಡ್ಡಿಯನ್ನೇಕೆ ಹಾಕಿದೆ?

ಗುಂಡ: ಜಮೀನು ಬೇಕಿದ್ದರೆ ಮೊದಲು ಬಿಸಿ ಮಾಡು ಎಂದು ಅವರೇ ಹೇಳಿದ್ದರು ಯುವರ್ ಆನರ್!

★★★

ಪುಢಾರಿ: ಒಮ್ಮೆ ತನ್ನ ಆಪ್ತ ಬಾಲಂಗೋಚಿಗೆ ಹೇಳಿದರು, 'ನೀವು ಮದುವೆಯಾದರೆ ನಿನ್ನ ಪತ್ನಿಗೆ ಮೊತ್ತ ಮೊದಲ ಮುತ್ತು ನಾನು ನೀಡುತ್ತೇನೆ'.

ಇಕ್ಕಟ್ಟಿಗೆ ಸಿಲುಕಿದ ಜಾಣ ಬಾಲಂಗೋಚಿ ಉತ್ತರಿಸಿದ, 'ಆಗಲಿ ಸಾರ್, ಆದರೆ ನನ್ನದೂ ಒಂದು ವಿನಂತಿಯಿದೆ, ನಡೆಸಿಕೊಡುತ್ತೇನೆಂದು ಮಾತು ಕೊಡಿ..'

ಪುಢಾರಿ: ಸರಿ, ಏನದು ಹೇಳು?

ಬಾಲಂಗೋಚಿ: ನಾನು ನಿಮ್ಮ ತಂಗಿಯನ್ನು ಮದುವೆಯಾಗುತ್ತೇನೆ..!

★★★

ಮನೆಯ ಹೊರಗಡೆ ಬಾಗಿಲಲ್ಲಿ ಭಿಕ್ಷುಕನೋರ್ವ ಕೂಗಿದ, 'ತಂಗಿ..., ಬಾಬಾ ಹಸಿದಿದ್ದಾನೆ. ಏನಾದರೂ ತಿನ್ನಲಿಕ್ಕೆ ಕೊಡು'

ಒಳಗಡೆಯಿಂದ ಧ್ವನಿ ಬಂತು, 'ನಿನ್ನ ತಂಗಿ ತವರುಮನೆಗೆ ಹೋಗಿದ್ದಾಳೆ. ಇವತ್ತು ನಿನ್ನ ಭಾವ ಕೂಡಾ ಹಸಿದಿದ್ದಾನೆ'

★★★

ಅಪ್ಪ: ನಿನ್ನ ರಿಪೋರ್ಟ್ ಕಾರ್ಡ್ ಎಲ್ಲೋ?

ಗುಂಡ: ಅದನ್ನು ಗೆಳೆಯ ಕೊಂಡು ಹೋದ.

ಅಪ್ಪ: ಅವನಿಗ್ಯಾಕೋ ಕೊಟ್ಟೆ?

ಗುಂಡ: ಅವನ ಅಪ್ಪ ಅಮ್ಮನನ್ನು ಹೆದರಿಸಬೇಕೂಂತ ಕೇಳಿ ತಗೊಂಡ!

★★★



ತಾಯಿ ಮತ್ತು ಪತ್ನಿಗಿರುವ ವ್ಯತ್ಯಾಸವೇನು?

'ತಾಯಿ ಮಾತನಾಡಲು ಕಲಿಸುತ್ತಾಳೆ ಮತ್ತು ಪತ್ನಿ ಮೌನವಾಗಿರಲು ಕಲಿಸುತ್ತಾಳೆ'

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**